Consideration of clauses.

CLAUSES 2 AND 3

Mr. DEPUTY SPEAKER.—The question is :

"That Clauses 2 and 3 do stand part of the Bill."

The motion was adopted.

Clauses 2 and 3 were added to the Bill.

CLAUSE 1, ETC.

Mr. DEPUTY SPEAKER.—The question is :

"That Clause 1, the Long Title, the Preamble and the Enacting Formula do stand part of the Bill."

The motion was adopted.

Clause 1, the Long Title, the Preamble and the Enacting Formula were added to the Bill.

MOTION TO PASS

Sri H. SIDDAVEERAPPA.—I beg to move :

"That the Mysore Ayurvedic and Unani Practitioners' Registration and Medical Practitioners' Miscellaneous Provisions (Amendment) Bill, 1972 be passed."

Mr. DEPUTY SPEAKER.—The question is :

"That the Mysore Ayurvedic and Unani Practitioners' Registration and Medical Practitioners' Miscellaneous Provisions (Amendment) Bill, 1972 be passed "

The motion was adopted and the Bill was passed.

MYSORE TENANTS (RELIEF IN PAYMENT OF ARREARS OF RENT) BILL, 1972.

Motion to Consider

Sri N. HUTCHAMASTHY GOWDA (Minister for Revenue).—Sir, I beg to move :

"That the Mysore Tenants (Relief in Payment of Arrears of Rent) Bill, 1972 be taken into consideration."

Mr. DEPUTY SPEAKER.—Motion moved :

"That the Mysore Tenants (Relief in Payment of Arrears of Rent) Bill, 1972 be taken into consideration.

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ಭೂಸಾಶನ ಮಸೂದೆ 1972 ನೇ ಇಸವಿಯಲ್ಲಿ ಈ ಸಭೆಯಲ್ಲಿ ಚರ್ಚೆಗೆ ಬಂದಿದ್ದಾಗ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದರು. ಗೇಣಿದಾರರಿಂದ ಗೇಣಿ ಬಾಕಿ ಬಹಳ ನಿಂತಾಗ, ಗೇಣಿದಾರರನ್ನು ಒಕ್ಕಲೆಬ್ಬಿಸತಕ್ಕಂಥ ಒಂದು ಕ್ರಮ ರಾಜ್ಯದ ಬಹುಭಾಗಗಳಲ್ಲಿ ಬಹು ಬಿರುಸಾಗಿ ನಡೆಯುತ್ತಿದ್ದಾಗ, ಅದನ್ನು ತಪ್ಪಿಸುವ ಉದ್ದೇಶದಿಂದ ಆ ಕಾಲದಲ್ಲಿ ಒಂದು ಮಸೂದಾ ಕಾನೂನನ್ನು ಈ ಸಭೆಯ ಮುಂದೆ ತರಲಾಗಿತ್ತು. ಅದು ಪಾಸಾಗಿ ತಾರೀಖು 11-5-1972 ರಿಂದ ಜಾರಿಗೆ ಬಂದಿದೆ. ಆಗ ಆ ಕಾನೂನಿನಲ್ಲಿರತಕ್ಕಂಥ ಒಂದು ಕಾಲಮ್‌ನಲ್ಲಿ ಯಾರು ಗೇಣಿ ಬಾಕಿದಾರರಾಗಿರುತ್ತಾರೋ, ಅವರು ಎರಡು ವರ್ಷದ ಗೇಣಿಯನ್ನು ಕೊಟ್ಟರೆ ಅವರನ್ನು ಒಕ್ಕಲೆಬ್ಬಿಸಬಾರದೆಂದು ಇತ್ತು. ಆ ರೀತಿ ಕಾನೂನು ಇದ್ದರೂ ಕೂಡ, ಬಾಕಿ ನಿಂತಿರುವ ಗೇಣಿಯನ್ನು ವಸೂಲು ಮಾಡಲು ಜಮೀನುದಾರರು ಡಿಕ್ರಿ ಪಡೆದು, ಬೆಳೆದ ಫಸಲನ್ನು ಹರಾಜು ಮಾಡುವಂತಹ ನಾನಾ ಕ್ರಮಗಳನ್ನು ಅನುಸರಿಸಿ, ಗೇಣಿದಾರರನ್ನು ನೇರವಾಗಿ ಒಕ್ಕಲೆಬ್ಬಿಸದಿದ್ದರೂ ಸಹ, ಬೇರೆ ವಿಧಾನಗಳನ್ನು ಅನುಸರಿಸುವುದರ ಮೂಲಕ ಅವರೇ ಜಮೀನನ್ನು ಬಿಟ್ಟು ಹೋಗುವಂತೆ ಮಾಡುತ್ತಿದ್ದಾರೆಂಬ ವಿಷಯವನ್ನು ಕಳೆದ ಅಧಿವೇಶನದ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಇನ್ನಿತರ ಸದಸ್ಯರುಗಳು ಸ್ಪಷ್ಟವಾಗಿ ತಿಳಿಸಿದ್ದರು. ಆದಕ್ಕಾಗಿ ಸರ್ಕಾರದವರು ಈ ಬಗ್ಗೆ ಪೂರ್ಣವಾದ ಅಂಕಿಅಂಶಗಳನ್ನು ಸಂಗ್ರಹಿಸಿ, ಇಂತಹ ಪರಿಸ್ಥಿತಿ ನಡೆಯದಂತೆ ಸರ್ಕಾರದವರು ಸುಗ್ರೀವಾಜ್ಞೆಯನ್ನು ಹೊರಡಿಸುವುದರ ಮೂಲಕ ಸೂಕ್ತ ಕಾರ್ಯಕ್ರಮ ಕೈಗೊಂಡರು. ಈ ಒಂದು ಸುಗ್ರೀವಾಜ್ಞೆ ತಾರೀಖು 28-10-1972 ರಂದು ಪ್ರಕಟವಾಗಿದೆ. ಅದರಲ್ಲಿರತಕ್ಕಂಥ ಮುಖ್ಯವಾದ ಅಂಶಗಳು ಏನೆಂದರೆ, ಗೇಣಿ ಬಾಕಿ ಇದ್ದಾಗ, ಗೇಣಿಯನ್ನು ಕೊಡುವುದಕ್ಕೆ ಕಂತುಗಳನ್ನು ಗೊತ್ತು ಮಾಡುವುದು, ಭೂಕಂದಾಯವನ್ನು ವಜಾ ಮಾಡಿದಾಗ, ಅಥವಾ ಸಸ್ಪೆನ್‌ಷನ್ ಮಾಡಿದಾಗ ಕಂತನ್ನು ಮುಂದಕ್ಕೆ ಹಾಕುವುದು, ಗೇಣಿದಾರರನ್ನು ಅರೆಸ್ಟ್ ಮಾಡಿ ಜೈಲಿನಲ್ಲಿ ಇಡುವುದನ್ನು ತಪ್ಪಿಸುವುದು, ಇತ್ಯಾದಿ ಕೆಲವು ನಿಯಮಗಳನ್ನು ಅದರಲ್ಲಿ ಅಳವಡಿಸಿ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿತ್ತು. ಅದಕ್ಕನುಸಾರವಾಗಿ ಕಾನೂನು ಪ್ರಕಾರ ಈಗ ಶಾಸನವಾಗಬೇಕಾಗಿದೆ. ಅದಕ್ಕಾಗಿ ಈ ಮಸೂದಾ ಕಾನೂನನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. ಮಾನ್ಯ ಸದಸ್ಯರು ಈ ಹಿಂದೆ ಇದರ ಬಗ್ಗೆ ಸಾಕಾದಷ್ಟು ಚರ್ಚೆ ಮಾಡಿದಾಗ, ಅದರ ಸಾರಾಂಶವನ್ನು ತಿಳಿದುಕೊಂಡು, ಅದರ ಒಂದು ಫಲವಾಗಿ ತೆಗೆದುಕೊಂಡು ಬಂದಿರುವ ಮಸೂದಾ ಕಾನೂನು ಇದು ಆಗಿರುವುದರಿಂದ, ಇದಕ್ಕೆ ಮಾನ್ಯ ಸದಸ್ಯರೆಲ್ಲರೂ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ. ಈ ಮಸೂದೆಯನ್ನು ಅತ್ಯಂತ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಒಂದು ಸಂತೋಷದ ವಿಷಯವೆಂದರೆ, ಕೊನೆಯ ಕಾಲಕ್ಕಾದರೂ ನಮ್ಮ ಕಂದಾಯ ಮಂತ್ರಿಗಳಿಗೆ ಜ್ಞಾನೋದಯವಾಯಿತಲ್ಲ ಎಂಬುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಸರ್ವಜ್ಞನೇ!

ಶ್ರೀ ಕಾಗೋಡು ತಿಮ್ಮಪ್ಪ.—ಸಂಕಟದಲ್ಲಿರುವ ಗೇಣಿದಾರರ ಬಗ್ಗೆ ನಾನು ಅನೇಕ ಸಲ ಹೇಳಿಕೊಂಡಿದ್ದೇವೆ. ಅದಕ್ಕೆ ಇದುವರೆಗೆ ಪರಿಹಾರ ಸಿಕ್ಕಿರಲಿಲ್ಲ. ಕೇವಲ ಗೇಣಿಯನ್ನು ಡಿಕ್ರಿ ಪಡೆದುಕೊಂಡ ಸಂದರ್ಭದಲ್ಲಿ, ಗೇಣಿ ಕೊಡುವುದಕ್ಕೆ ಆಗದೆ ಸಾವಿರಾರು ಗೇಣಿದಾರರು ಜಮೀನುದಾರರ ಪಾದದಡಿಯಲ್ಲಿ ಅನೇಕ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದ ಜಮೀನನ್ನು ಬಿಟ್ಟು ಅವರಿಗೆ ವಂದನೆಯನ್ನು ಸಲ್ಲಿಸಿ, ಉಪವಾಸ, ವನವಾಸ ಮಾಡಿದಂತಹ ಸಂದರ್ಭಗಳನ್ನು ನಾವು ಕಣ್ಣಾರೆ ನೋಡಿದ್ದೇವೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಅಕಸ್ಮಾತ್ ಈ ಒಂದು ಮಸೂದೆ ಬಂದಿದ್ದು ಎಷ್ಟೋ ಜನ ಗೇಣಿ ರೈತರನ್ನು ಉಳಿಸುವುದಕ್ಕೆ ಸಾಧನವಾಗಿದೆ. ಈಗಾಗಲೇ ಮಾನ್ಯ ಕಂದಾಯ ಮಂತ್ರಿಗಳು ಹೇಳಿದಂತೆ, ಇದರಲ್ಲಿ ರೈತನಿಗೆ ಕಂತನ್ನು ಕೊಡುವಾಗ ಅವನ ವಾರ್ಷಿಕ ನಿವ್ವಳ ಆದಾಯವನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಇದೆ. ಅದರಂತೆ ನಿವ್ವಳ ಆದಾಯವನ್ನು ಪರಿಗಣನೆಗೆ ತೆಗೆದುಕೊಳ್ಳುವಾಗ ಕೆಲವು ಖರ್ಚುಗಳನ್ನು ಸಹ ಗಣನೆಗೆ ತೆಗೆದುಕೊಳ್ಳಬೇಕೆಂಬ ಅಂಶಗಳನ್ನು ಈ ಮಸೂದೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಸುಮಾರು 4 ಸಂದರ್ಭಗಳಲ್ಲಿ ರೈತನ ಖರ್ಚುಗಳನ್ನು ಕಳೆದು ಅವನ ನಿವ್ವಳ ಆದಾಯವನ್ನು ನಿರ್ಧಾರ ಮಾಡಬೇಕೆಂದು ಈ ಮಸೂದೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಆದರೆ ಇದರಲ್ಲಿ ಗೇಣಿ ಕೊಡುವಾಗ ಚಾಲ್ತಿ ವರ್ಷದ ಗೇಣಿಯ ಲೆಕ್ಕವನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಜೊತೆಗೆ ಇದರಲ್ಲಿ ಒಬ್ಬ ರೈತನೇ ಎರಡು, ಮೂರು ನಾಲ್ಕು ಜಮೀನುದಾರರುಗಳ ಭೂಮಿಯನ್ನು ಮಾಡುತ್ತಿರಬಹುದು. ಅಂತಹ ಸಂದರ್ಭಗಳಲ್ಲಿ ನಿವ್ವಳ ರಾಭವನ್ನು ಅಂದಾಜು ಮಾಡುವಾಗ ಗೇಣಿದಾರನ ವೆಚ್ಚಗಳನ್ನೂ ವಜಾ ಮಾಡ

ಬೇಕು. ಈ ದೃಷ್ಟಿಯಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದೇ ಬಿಲ್ಲಿನ 4 ನೇ ಸೆಕ್ಷನ್‌ನಲ್ಲಿ ಎಕ್ಸ್‌ಪ್ಲನೇಷನ್‌ನಲ್ಲಿ ಗೇಣಿದಾರರ ಬಗ್ಗೆ ನಾಲ್ಕು ವಿಚಾರಗಳನ್ನು ದೃಷ್ಟಿಯಲ್ಲಿ ಇಡಬೇಕೆಂದು ಹೇಳಿದ್ದಾರೆ. ಅದೇ ಜೀವನಾಂಶ ಕೊಡುವಾಗ ಡಿಕ್ರಿ ಪಡೆದಿದ್ದರೆ ಅದನ್ನು ಕೂಡ ಇದರಲ್ಲಿ ವಜಾ ಮಾಡಬೇಕು. ಅಲ್ಲದೆ ಸಿವಿಲ್ ಕೋರ್ಟಿನಲ್ಲಿ ಗೇಣಿ ರೈತನ ಮೇಲೆ ಡಿಕ್ರಿಯೇನಾದರೂ ಆಗಿದ್ದರೆ ಅದನ್ನೂ ಕೂಡ ಇದರ ನಿವ್ವಳ ಆದಾಯದಿಂದ ವಜಾ ಮಾಡಬೇಕಾಗುತ್ತದೆ. ಇವೆರಡು ನ್ಯೂನತೆಗಳನ್ನು ಮಾನ್ಯ ಮಂತ್ರಿಗಳು ಇದರಲ್ಲಿ ಯಾವ ರೀತಿ ಆಳವಡಿಸಬಹುದು ಅದನ್ನು ಯೋಚನೆ ಮಾಡಿ ಅದಕ್ಕೆ ತಕ್ಕಂತೆ ಬದಲಾವಣೆ ಮಾಡಬಹುದು ಎಂದು ಅವರಲ್ಲಿ ಕೇಳಿಕೊಂಡು ನಾನು ಈ ಮಸೂದೆಗೆ ನನ್ನ ಬೆಂಬಲವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಕಳೆದ ಅಧಿವೇಶನದಲ್ಲಿ ಗೇಣಿದಾರರು ಎರಡು ವರ್ಷದ ಗೇಣಿಯನ್ನು ಕೊಟ್ಟರೆ ಅಂತಹ ಗೇಣಿದಾರರನ್ನು ಉಚ್ಚಾಟನೆ ಮಾಡುವ ಹಾಗಿಲ್ಲ ಎಂದು ಒಂದು ಬಿಲ್ಲನ್ನು ತಂದಿದ್ದರು. ಆದರೆ ಈಗ ಇದನ್ನು ಬದಲಾವಣೆ ಮಾಡಿ ಇಲ್ಲಿ ಒಂದು ರೀತಿಯಾದ ಬಿಲ್ಲನ್ನು ತಂದಿದ್ದಾರೆ. ಇದನ್ನು ಏಕೆ ತಂದರೋ ನನಗೆ ಅರ್ಥವಾಗುವುದಿಲ್ಲ. ಈ ರೀತಿ ಚಿಲ್ಲರೆ ಚಿಲ್ಲರೆಯಾಗಿ ಕಾನೂನುಗಳು ಭೂಸುಧಾರಣೆಗೆ ಸಂಬಂಧಪಟ್ಟ ಹಾಗೆ ಆಗಿಂದಾಗ್ಗೆ ಬರುತ್ತಲೇ ಇವೆ. ನಾವು ಈ ರೀತಿ ತರುವುದಕ್ಕಿಂತ ಒಂದು ಸಮಗ್ರವಾದ ಮಸೂದೆಯನ್ನು ತಿದ್ದುಪಡಿ ಮಾಡಿ ತರಬೇಕೆಂದು ಹೇಳುತ್ತಿದ್ದರೂ ಅದನ್ನು ತರದೆ ಈ ರೀತಿ ಸಣ್ಣ ಸಣ್ಣ ತಿದ್ದುಪಡಿಗಳನ್ನು ಮಾಡಿ ಇಂತಹ ಸಣ್ಣ ಮಸೂದೆಗಳನ್ನು ಏಕೆ ಸರಕಾರದವರು ತರಬೇಕೆಂದು ಕೇಳುತ್ತಿದ್ದೇನೆ, ಈಗಾಗಲೇ ಭೂಸುಧಾರಣೆ ಕಾನೂನು ಬಗ್ಗೆ ಕೋರ್ಟಿನಲ್ಲಿ ಸಾವಿರಾರು ವ್ಯವಹಾರಗಳಾಗಿವೆ. ಈಗ ಮತ್ತೆ ಗೇಣಿದಾರರಿಗೆ ಕಷ್ಟಗಳಾಗುತ್ತಿವೆ ಎಂದು ಇದನ್ನು ತಿದ್ದುಪಡಿ ಮಾಡಿ ಕೆಲವು ಅನುಕೂಲಗಳನ್ನು ಮಾಡಿಕೊಡಲು ಇಲ್ಲಿ ಒಂದು ತಿದ್ದುಪಡಿ ತಂದಿದ್ದಾರೆ ಮತ್ತು ಇದರಲ್ಲಿ ಗೇಣಿದಾರನಿಗೆ ಜೈಲು ಶಿಕ್ಷೆಯನ್ನು ತಪ್ಪಿಸಬೇಕು ಹಾಗೂ ಇನ್ನಿತರ ಸೌಕರ್ಯಗಳನ್ನು ಕೊಡಬೇಕೆಂದು ಇಲ್ಲಿ ಬಿಲ್ಲನ್ನು ತಂದಿದ್ದಾರೆ. ನಮ್ಮ ಮಾನ್ಯ ಮಂತ್ರಿಗಳು ಬಡ ಗೇಣಿದಾರರಿಗೆ ಯಾವ ರೀತಿ ಅನುಕಂಪ ತೋರುತ್ತಿದ್ದಾರೋ ಅದೇ ರೀತಿ ತಲೆತಲಾಂತರದಿಂದ ಬಂದಿರುವ ಜಮೀನುದಾರರನ್ನು ಶೋಷಣೆ ಮಾಡಬೇಕೆಂಬ ಇಂತಹ ಬಿಲ್ಲನ್ನು ತರುತ್ತಿದ್ದಾರೆ. ಆದರೆ ಕೆಲವು ಸಣ್ಣ ಜಮೀನುದಾರರುಗಳು ಜಮೀನನ್ನೇ ನಂಬಿಕೊಂಡು ಜೀವನ ಮಾಡುವವರು ಹಾಗೂ ಅತಿ ಬಡವರಾಗಿರುವವರ ಬಗ್ಗೆ ಸ್ವಲ್ಪ ದಯತೋರಿಸಿ ಅವರಿಗೂ ಸಹಾಯ ಮಾಡಬೇಕು, ಗೇಣಿದಾರರನ್ನು ಯಾವ ರೀತಿ ಉದ್ಧಾರ ಮಾಡಬೇಕೆಂದು ಇದ್ದಾರೋ ಅದೇ ರೀತಿ ಸಣ್ಣ ಹಿಡುವಳಿದಾರರು ಹಾಗೂ ಬಡವರಾಗಿರುವ ಜಮೀನುದಾರರುಗಳಿಗೆ ಅವರ ಜೀವನ ಮಾಡಲು ಅನುಕೂಲವಾಗುವಂತೆ ಸರಕಾರ ಒಂದು ದಾರಿ ಮಾಡಿಕೊಡಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ. ತಾವು ಸೋಷಿಯಲಿಸ್ಟ್ ತತ್ವವನ್ನು ತಂದು ಬಡವರನ್ನು ಉದ್ಧಾರ ಮಾಡಬೇಕೆಂದು ಇರುವಾಗ ಮತ್ತು ಆ ಧೋರಣೆಯಂತೆ ಬಡ ಗೇಣಿದಾರರಿಗೂ ಹಾಗೂ ಸಣ್ಣ ಹಿಡುವಳಿದಾರರುಗಳಿಗೂ ಏನಾದರೂ ಒಂದು ದಾರಿಯನ್ನು ಮಾಡಿಕೊಡತಕ್ಕದ್ದು ಸರಕಾರದ ಒಂದು ಕೆಲಸ. ಆದುದರಿಂದ ಇದಕ್ಕೆ ಅನುಕೂಲವಾಗುವಂತೆ ಒಂದು ಸಮಗ್ರವಾದ ಬಿಲ್ಲನ್ನು ತಂದು ಒನ್ಸ್‌ಫಾರ್ ಆಲ್ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ. ಸರಕಾರ ಇದರ ಬಗ್ಗೆ ಯೋಚನೆ ಮಾಡಿ ಬೇಗನೆ ಯಾವುದಾದರೂ ಒಂದು ರೀತಿಯಾದ ಆಜ್ಞೆಯ ತೀರ್ಮಾನ ಮಾಡಿ ಇಲ್ಲಿ ಒಂದು ಸಮಗ್ರವಾದ ಬಿಲ್ಲನ್ನು ತರುವುದು ಸೂಕ್ತವಾಗಿರುತ್ತದೆ. ಇದನ್ನು ಸರಕಾರ ಬೇಗನೆ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಮಂಡನೆ ಮಾಡಿರತಕ್ಕ ಈ ತಿದ್ದುಪಡಿ ಮಸೂದೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ ಮತ್ತು ನನ್ನ ಬೆಂಬಲವನ್ನೂ ಕೊಡುತ್ತೇನೆ. ಮಾನ್ಯ ಸಚಿವರ ಬಗ್ಗೆ ಇಂತಹ ಒಂದು ಒಳ್ಳೆಯ ಮಾತನ್ನು ಆಡುವುದಕ್ಕೆ ನನಗೆ ಬೇರೆ ಒಂದು ಅವಕಾಶ ಸಿಗುವುದಿಲ್ಲ. ಏಕೆಂದರೆ ಅವರಿಗೆ ಬಡವರ ಬಗ್ಗೆ ಒಳ್ಳೆಯ ಹೃದಯವಿದೆ ಎನ್ನುವುದು ಇದರಿಂದ ಗೊತ್ತಾಗುತ್ತೆ. ಬಡವರ ಬಗ್ಗೆ ಸಹೃದಯತೆ ಇವರಲ್ಲಿದೆ ಆದರೆ ಇನ್ನು ಕೆಲವರಿಗೆ ಹೃದಯವಿದ್ದರೂ ಅಂತಹ ಹೃದಯವನ್ನು ಜೇಬಲ್ ಮೇಲೆ ಇಟ್ಟು ಬೇರೆ ರೀತಿಯಾಗಿರುತ್ತಾರೆ. ಆದರೆ ನಮ್ಮ ಕಂದಾಯ ಮಂತ್ರಿಗಳಿಗೆ ಅವರ ಹೃದಯದಲ್ಲಿ ಬಡವರ ಬಗ್ಗೆ ತುಂಬಾ ಅನುಕಂಪವಿದೆ. ಯಾವ ದೇಶದಲ್ಲಿ ಜಮೀನುದಾರರುಗಳ ಕೈಕೆಳಗೆ ಉಳಿಗತ್ತನವನ್ನು ಶತಮಾನದಿಂದಲೂ ನಡೆಸಿಕೊಂಡು ಬರುತ್ತಿದ್ದಂತಹ ಬಡಜನರು ಇದ್ದಾರೋ ಅಂತಹ ಬಡ ಜನರ ಮೇಲೆ ಆಗುತ್ತಿದ್ದ ಕಷ್ಟಗಳನ್ನು ತಪ್ಪಿಸಬೇಕೆಂದು ಇಂತಹ ಒಂದು ಕಾನೂನನ್ನು ತಂದು

(ಶ್ರೀ ಎಸ್. ಬಂಗಾರಪ್ಪ)

ಅದನ್ನು ತೆಗೆದು ಹಾಕಿದ್ದಾರೆ. ಇದರಿಂದ ಬಡಗೇಣಿದಾರರಿಗೆ ಬಹುಮಟ್ಟಿಗೆ ಅನುಕೂಲವಾಗುತ್ತದೆ. ಅದರೆ ಇದೇ ಸಂದರ್ಭದಲ್ಲಿ ಇನ್ನೂ ಒಂದು ಮಾತು ಹೇಳುತ್ತೇನೆ. ಸರಕಾರದವರು ಇದರ ಬಗ್ಗೆ ಯಾವ ರೀತಿ ಮಾಡುತ್ತಿದ್ದಾರೆಂದರೆ ಮೆಟ್ಟಲು ಮೆಟ್ಟಲಾಗಿ, ಮಗು ಅಂಬೆಗಾಲು ಇಟ್ಟು ಹತ್ತುವ ಹಾಗೆ ಬಹಳ ನಿಧಾನವಾಗಿ ಹೋಗ ತ್ತಿದ್ದಾರೆ. ಇದರ ಬಗ್ಗೆ ನಿಮಗೆ ಶಕ್ತಿ ಇದೆ. ಈ ಮೆಟ್ಟಲನ್ನು ಬಿಟ್ಟು ಒಂದೇ ಸಾರಿ ಸ್ವಲ್ಪ ಹೆಚ್ಚಾಗಿ ಮೆಟ್ಟಲುಗಳನ್ನು ಹಾರಬಹುದಾಗಿತ್ತು. ಆದರೆ ಹಾಗೆ ಮಾಡಲು ನಿಮಗೆ ಕೊಂದರೆ ಇದೆ. ನಮಗೂ ಅದು ಗೊತ್ತು. ಈಗಾಗಲೇ ಭೂಸುಧಾರಣೆ ಮಸೂದೆ ತರುತ್ತೇವೆಂದು ಹೇಳಿದ್ದೀರಿ. ಆದರೆ ಇದರಲ್ಲಿರುವ ಸೀಲಿಂಗ್ ಲಿಮಿಟ್ಟುಗಳ ಗೊಂದಲ ಗಳಿಂದಾಗಿ ಇನ್ನೂ ಯಾವ ತೀರ್ಮಾನಕ್ಕೂ ನಿಮಗೆ ಬರಲು ಆಗಲಿಲ್ಲ, ಇದು ನಮಗೆಲ್ಲಾ ಗೊತ್ತಿದೆ. ಹಿಂದೆ ಇದರ ಬಗ್ಗೆ ಏನು ಹೇಳಿದಿರಿ ಮತ್ತು ಇಂದು ತಾವು ಏನು ಹೇಳುತ್ತಿದ್ದೀರಿ ಅದನ್ನೆಲ್ಲಾ ನಾವು ನೋಡುತ್ತಿದ್ದೇವೆ. ಹಿಂದೆ ಇಷ್ಟು ಸ್ಟಾಂಡರ್ಡು ಎಕರೆ ಇರಬೇಕೆಂದು ಹೇಳುತ್ತಿದ್ದಿರಿ. ಈಗ ಕೋರ್ಟಿನಲ್ಲಿ ಬರುವ ಹೇಳಿಗೆ ಸ್ಟಾಂಡರ್ಡು ಎಕರೆ ಎನ್ನುವುದು ಹೋಗಿ ಅದು ಬರೀ ಇಷ್ಟು ಎಕರೆ ಗಳು ಎಂದಾಗುತ್ತಿದೆ. ಆದರೆ ಇದರ ಬಗ್ಗೆ ನೀವೇ ಇನ್ನೂ ಖಚಿತವಾದ ಯಾವ ಒಂದು ತೀರ್ಮಾನವನ್ನೂ ತೆಗೆದುಕೊಳ್ಳಲು ಆಗುತ್ತಿಲ್ಲ ಮತ್ತು ಇದುವರೆಗೆ ಸರಕಾರದ ಯಾವ ತೀರ್ಮಾನವೂ ಬರಲಿಲ್ಲ. ಮತ್ತು ಯಾವ ರೀತಿಯಾದ ಪರಿಹಾರ ಜನಗಳಿಗೆ ಸಿಗುತ್ತದೆ ಅದೂ ಸಮಂಜಸವಾಗಿ ಹಾಗೂ ಸಂತೋಷದಿಂದ ಅನುಕೂಲವಾಗುತ್ತದೆ ಎಂದು ಹೇಳುವಂತಹ ಬಿಲ್ಲನ್ನು ಈ ದಿಸೆಯಲ್ಲಿ ತರುತ್ತಿಲ್ಲ. ಚುನಾವಣೆ ಕಾಲದಲ್ಲಿ ತಾವು ಹೇಳಿರತಕ್ಕ ಮಾತನ್ನು ತಮ್ಮ ಮುಂದೆ ಇಟ್ಟರೆ, ಅದೇ ಧಾಟಿಯಲ್ಲಿ ಹೇಳಿದರೆ ನಿಮಗೆ ಇದೆಲ್ಲ ಏನು ಎಂದು ಚುನಾವಣೆ ಕಾಲದಲ್ಲಿ ಹೇಳಿರುವುದು ಮರೆತು ಹೋಗಿದೆಯೇ ಎನ್ನುವ ಭಾವನೆ ಬರಬಹುದು. ಹಿಂದೆ ಯಾರೂ ತಂದಿಲ್ಲ, ಮುಂದೆ ಯಾರೂ ತರುವುದಿಲ್ಲ, ಹಾಗೆ ಮಾಡುತ್ತೇವೆ ಎನ್ನುವ ರೀತಿಯಲ್ಲಿ ಚುನಾವಣೆ ಕಾಲದಲ್ಲಿ ಹೇಳಿದಿರಿ. ಭೂ ಸುಧಾರಣೆ ಎಂದು ಬೊಬ್ಬೆ ಹಾಕಿದರೂ, ಈಗ ಇರುವ ಪರಿಸ್ಥಿತಿಯಲ್ಲಿ ರಿಸ್ಯೂಮಬಲ್ ಲ್ಯಾಂಡ್ ಸುಮಾರು ಸೇಕಡ ಎರಡರಷ್ಟು ಬರಬಹುದು ಎಂದು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ. ಆದರೆ ಈಗ ಇರುವಂಥ ಪರಿಸ್ಥಿತಿಯನ್ನು ನೋಡಿದರೆ ಸೇಕಡ ಒಂದು ಪಾಯಿಂಟ್ ಚಿಲ್ಲರೆ ಬರಬಹುದೋ ಏನೋ ಗೊತ್ತಿಲ್ಲ. ಭೂಮಿಯ ಮಾರಾಟವನ್ನು ಪ್ರಾಹಿಬಿಟ್ ಮಾಡಲಿಲ್ಲ.

4-00 P. M.

ಈಗ ತಂದಿರುವ ಮಸೂದೆ ಒಳ್ಳೆಯದು ಎನ್ನುವ ವಿಷಯವನ್ನು ನಾನು ಒಪ್ಪುತ್ತೇನೆ. ಗೇಣಿ ದಾರರಿಗೆ ಹಕ್ಕನ್ನು ಹೊರಡಿಸಿಕೊಡಬೇಕು ಎನ್ನುವ ಆಧಾರದ ಮೇಲೆ ಸಂಪೂರ್ಣವಾಗಿ ನಿಮ್ಮ ಸಮಾಜವಾದವನ್ನು ದೇಶದ ಮುಂದೆ ಇಡಿ. ಇದಕ್ಕಿಂತ ಹೆಚ್ಚು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಇಷ್ಟು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಇರುವ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಸ್ವತಂತ್ರ ಆಕ್ಟ್ ಮಾಡಿದ ಈಗ ಇದ್ದ ಕಾಯಿದೆಯ 8 ಮತ್ತು 20ನೇ ಕಲಮಿನಲ್ಲಿ ತಿದ್ದುಪಡಿ ಮಾಡಿದ್ದರೂ ಕೂಡ ನಮಗೆ ಬೇಕಾದ ವಿಷಯ ಪರಿಪಾಲನೆಯಾಗುತ್ತಿತ್ತು. ಆದಾಗ್ಯೂ ಕೂಡ ಸ್ವತಂತ್ರ ರೀತಿಯಿಂದ ತಂದರೂ ಗೇಣಿ ದಾರರಿಗೆ ಸಾಕಷ್ಟು ಪರಿಹಾರ ಕೊಡುವ ತತ್ವ ಇದರಲ್ಲಿ ಅಡಕವಾಗಿದೆ. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಆದರೆ ಇದರಲ್ಲಿ ಕೇವಲ ಹಿಂದೆ ಗುಳಿದಂಥ ಆರಿಯರ್ಸ್ ಬಗ್ಗೆ ವಿಶೇಷವಾಗಿ ಗೇಣಿ ದಾರರಿಗೆ ಪರಿಹಾರವನ್ನು ಕೊಟ್ಟು ಕಂತಿನ ರೂಪದಲ್ಲಿ ಕೊಡುವುದಕ್ಕೆ ಅವಕಾಶ ಮಾಡಿದ್ದಾರೆ. ಇನ್ನು ಮುಂದೆ ಬರುವಂಥ ಕಾಯಿದೆಯಲ್ಲಿ ಕಂತಿನಿಂದ ಗೇಣಿಯನ್ನು ಕೊಡುವಂಥ ಉಲ್ಲೇಖವಿಲ್ಲ. ಆ ದೃಷ್ಟಿಯಿಂದ ಈ ನವ ಯದಲ್ಲಿ ನಾನು ಸಲಹೆ ಮಾಡುವುದೇನೆಂದರೆ ಮಾಲೀಕನಿಗೆ ಕೊಡುವಂಥ ಗೇಣಿ ಏನಿದೆ ಅದನ್ನು ಕಂತಿನಲ್ಲಿ ಕೊಡತಕ್ಕುದು ಮತ್ತು ಕಂತಿನಲ್ಲಿ ಕೊಡದೆ ಇದ್ದರೆ ಯಾವ ರೀತಿ ವಸೂಲು ಮಾಡತಕ್ಕುದು ಇವನ್ನಾದರೂ ಮುಂಬರುವ ಭೂ ಸುಧಾರಣಾ ಕಾಯಿದೆಯಲ್ಲಿ ಸೇರಿಸ ಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ.

ಇದೇ ಪ್ರಕಾರವಾಗಿ ಗೇಣಿದಾರನಿಗೆ ಸಿವಿಲ್ ಜೈಲಿನಲ್ಲಿ ಹಾಕಿ ಗೇಣಿ ವಾಕಿಯನ್ನು ವಸೂಲು ಮಾಡುವ ಸಂಬಂಧದಲ್ಲಿ ಯಾವ ರೀತಿಯಾಗಿ ಎನಾಯಿತಿಯನ್ನು ಕೊಡಲಾಗಿದೆಯೋ ಅದೇ ರೀತಿ

ಯಾಗಿ ಮುಂಬರುವ ಭೂ ಸುಧಾರಣಾ ಕಾಯಿದೆಯಲ್ಲಿಯೂ ಈ ಸ್ವರೂಪದ ವಿನಾಯಿತಿಯನ್ನು ಗೇಣಿದಾರನಿಗೆ ಕೊಡಬೇಕೆಂದು ಕಂದಾಯ ಮಂತ್ರಿಗಳಿಗೆ ಸೂಚಿಸಿ ಈ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ.

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕದ್ದು, ಭೂ ಶಾಸನಕ್ಕೆ ತಂದಿರುವ ತಿದ್ದುಪಡಿ ಕಾನೂನಲ್ಲ. ಮಾನ್ಯ ಸದಸ್ಯರಾದ ಶಾಮಣ್ಣನವರು, ಬಂಗಾರಪ್ಪನವರು ಮತ್ತು ಬಂಗಿ ಅವರು ಮಾತನಾಡುವಾಗ ಇದು ಭೂ ಶಾಸನಕ್ಕೆ ಸಂಬಂಧಪಟ್ಟ ತಿದ್ದುಪಡಿ ಕಾನೂನು ಎಂದು ತಿಳಿದು ಹೇಳಿದರು. ಕಳೆದ ಅಧಿವೇಶನದಲ್ಲಿ ನಾನು ಭೂ ಶಾಸನದ ಬಗ್ಗೆ ಚರ್ಚೆ ಮಾಡಿದಾಗ ಈ ವಿಷಯದ ಪ್ರಸ್ತಾಪ ಮಾಡಿದ್ದರೂ ಕೂಡ, ತಿದ್ದುಪಡಿ ಕಾನೂನಿನಲ್ಲಿ ಇದನ್ನು ತರುವುದಕ್ಕೆ ಆಗುವುದಿಲ್ಲವೆಂದು ನಮ್ಮ ನ್ಯಾಯ ಇರಾಖೆಯ ಅಧಿಕಾರಿಗಳು ಸಲಹೆಯನ್ನು ಕೊಟ್ಟಿದ್ದರ ಮೇರೆ ಈ ಪ್ರಕಾರವಾದ ಕಾನೂನನ್ನು ತಂದಿರುವುದಾಗಿದೆ. ಇದು ಮೈಸೂರು ರಾಜ್ಯದ ಗೇಣಿದಾರರ (ಗೇಣಿ ಬಾಕಿ ಪಾವತಿ ಮಾಡುವ ಬಗ್ಗೆ ಪರಿಹಾರಕ್ಕೆ ಸಂಬಂಧಿಸಿದ) ವಿಧೇಯಕ. ಶ್ರೀಮಾನ್ ಶಾಮಣ್ಣನವರು ಮಾತನಾಡುತ್ತ ಚಿಲ್ಲರೆ ಚಿಲ್ಲರೆಯಾಗಿ ಭೂ ಶಾಸನವನ್ನು ಜಾರಿಗೆ ತರುತ್ತಿದ್ದೀರಿ, ಇದು ತಪ್ಪು, ಒಂದು ಸಮಗ್ರವಾದ ಭೂ ಶಾಸನವನ್ನು ಜಾರಿಗೆ ತಂದರೆ ಆಗ ಸಣ್ಣಪುಟ್ಟ ಹಿಡುವಳಿದಾರರಿಗೆ ಯಾವರೀತಿ ಸಹಾಯ ಮಾಡುವುದಕ್ಕೆ ಸಾಧ್ಯ, ರೈತರಿಗೆ ಸಹಾಯ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನೆಲ್ಲ ತೀರ್ಮಾನ ಮಾಡಬಹುದು ಎಂದು ಹೇಳಿದರು. ಈ ಅಧಿವೇಶನದ ಕಾರ್ಯಕ್ರಮ ಪಟ್ಟಿಯಲ್ಲಿ ಆ ಕಾನೂನು ಸೇರಿಸಲ್ಪಟ್ಟಿದೆ ಎನ್ನುವುದನ್ನು ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ತಿಳಿಸಬೇಕಾದ್ದಿಲ್ಲ. ಈಗ ಬಂದಿರತಕ್ಕ ಈ ಕಾನೂನು ಭೂ ಶಾಸನ ತಿದ್ದುಪಡಿ ಕಾನೂನಿನಲ್ಲಿ ಸೇರಿಸುವುದಕ್ಕೆ ಸಾಧ್ಯವಿಲ್ಲದೆ ಇರುವುದರಿಂದ ಗೇಣಿದಾರರಿಗೆ ಬಹಳ ಅತುರಾತುರವಾಗಿ ಸಹಾಯ ಕೊಡಬೇಕಾದ ಅವಶ್ಯಕತೆ ಇದ್ದುದರಿಂದ ಪ್ರತ್ಯೇಕವಾದ ಕಾನೂನನ್ನು ಸಭೆಯ ಮುಂದೆ ತರಬೇಕಾಯಿತು.

ಶ್ರೀಮಾನ್ ಶಾಮಣ್ಣನವರು ಮಾತನಾಡುತ್ತ ಸಣ್ಣ ಹಿಡುವಳಿದಾರರು ಕೆಲವರು, ಗೇಣಿದಾರನಿಗಿಂತ ನಿಕೃಷ್ಟವಾದ ಸ್ಥಿತಿಯಲ್ಲಿದ್ದಾರೆ, ಗೇಣಿದಾರನಿಗೆ ಅನುಕಂಪವನ್ನು ತೋರಿಸತಕ್ಕ ರೀತಿಯಲ್ಲಿ ಸಣ್ಣ ಹಿಡುವಳಿದಾರನ ವಿಷಯದಲ್ಲಿಯೂ ಅನುಕಂಪವನ್ನು ಇಟ್ಟುಕೊಳ್ಳಬೇಕು ಎಂದು ತಿಳಿಸಿದ್ದಾರೆ. ನಾವು ಭೂ ಸುಧಾರಣಾ ಶಾಸನದ ಬಗ್ಗೆ ಚರ್ಚೆ ಮಾಡುವ ಕಾಲದಲ್ಲಿ ಎಷ್ಟರ ಮಟ್ಟಿಗೆ ಸಣ್ಣ ಹಿಡುವಳಿದಾರನಿಗೆ ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ಆಲೋಚನೆ ಮಾಡುವುದಕ್ಕೆ ಅವಕಾಶವಿದೆ. ಈಗ ಗೇಣಿ ಬಾಕಿಯನ್ನು ವಸೂಲು ಮಾಡುವಾಗ ಗೇಣಿದಾರನಿಗೆ ತೊಂದರೆಯಾಗುತ್ತಿದೆ ಮತ್ತು ಅವನನ್ನು ನಾನಾ ವಿಧವಾದ ಹಿಂಸೆಗೆ ಒಳಪಡಿಸುವುದಕ್ಕೆ ಸಾಧ್ಯವಿದೆ. ಅದನ್ನು ತಪ್ಪಿಸುವುದಕ್ಕೆ ಈ ಕಾನೂನನ್ನು ತರಲಾಗಿದೆ. ಸಣ್ಣ ಹಿಡುವಳಿದಾರರ ವಿಷಯವನ್ನು ಇಲ್ಲಿ ಸೇರಿಸುವುದಕ್ಕೆ ಸಾಧ್ಯವಿಲ್ಲ.

ಶ್ರೀಮಾನ್ ಬಂಗಾರಪ್ಪನವರು ಅಂಬೆಗಾಲು ಇಡುತ್ತಿದ್ದೇವೆ, ಹಾರುವುದಕ್ಕೆ ಶಕ್ತಿ ಇದೆ ಎಂದು ಹೇಳಿದರು. ಎಷ್ಟರಮಟ್ಟಿಗೆ ಹಾರುವುದಕ್ಕೆ ಸಾಧ್ಯವೋ, ಓಡುವುದಕ್ಕೆ ಸಾಧ್ಯವೋ ನಡೆಯುವುದಕ್ಕೆ ಸಾಧ್ಯವೋ, ಅಂಬೆಗಾಲು ಇಡಲೇ ಬೇಕೋ ಎನ್ನುವುದನ್ನು ಭೂ ಶಾಸನಕ್ಕೆ ಸಂಬಂಧಪಟ್ಟ ತಿದ್ದುಪಡಿ ಕಾನೂನು ಬಂದಾಗ ಚರ್ಚೆ ಮಾಡಬಹುದು. ಆಗ ಅವರು ಸಲಹೆ ಮಾಡಬಹುದು.

ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಎರಡು ಮುಖ್ಯವಾದ ತಿದ್ದುಪಡಿಗಳನ್ನು ತರುವುದು ಅವಶ್ಯಕವೆಂದು ಹೇಳಿದರು. ಗೇಣಿದಾರನ ನಿವ್ವಳ ಆದಾಯವನ್ನು ಗೊತ್ತು ಮಾಡುವ ಸಂದರ್ಭದಲ್ಲಿ ಆ ವರ್ಷ ಕೊಡಬೇಕಾದ ಕಂತಿನ ಗೇಣಿ ಮೊಬಲಗನ್ನು ಕಳೆದು ನಿವ್ವಳ ಆದಾಯವೆಷ್ಟು ಎಂದು ಗೊತ್ತು ಮಾಡಬೇಕೆಂದು ಹೇಳಿದರು. ಒಬ್ಬರಿಗಿಂತ ಹೆಚ್ಚು ಜಮೀನ್ದಾರರಿಗೆ ಗೇಣಿಯನ್ನು ಕೊಡಬೇಕಾದ ಸಂದರ್ಭವಿರಬಹುದು. ಅಂಥ ಸಂದರ್ಭದಲ್ಲಿ ಕಂತನ್ನು ಕಳೆದು ಕೊಡಬೇಕೆಂದು ಹೇಳಿದ್ದಾರೆ. ಆದರೆ ಗೇಣಿದಾರನ ನಿವ್ವಳ ಆದಾಯವನ್ನು ಲೆಕ್ಕ ಹಾಕುವಾಗ ನಾವು ಈ ಮುಸೂದಾ ಕಾನೂನಿನಲ್ಲಿ ತಂದಿರತಕ್ಕ ನಾಲ್ಕು ಕ್ರಮಗಳನ್ನು ಅನುಸರಿಸಿದರೆ ಕಡೆಯಲ್ಲಿ ಎಷ್ಟು ಉಳಿಯುತ್ತದೆ ಎಂದು ಹೇಳುವುದಕ್ಕೆ ಕಷ್ಟವಾದ ಪರಿಸ್ಥಿತಿ ಇದೆ. ಒಂದು ಪಕ್ಷ ಶ್ರೀ ತಿಮ್ಮಪ್ಪನವರು ಮಾಡಿರುವ ಸಲಹೆಯ ಪ್ರಕಾರ ಸೇರಿಸಿದರೆ ಗೇಣಿದಾರನು ಜಮೀನ್ದಾರನಿಗೆ ಕೊಡದೆ ಹೋಗಲೂ ಬಹುದು. ನಿವ್ವಳ ಆದಾಯವನ್ನು ಗೊತ್ತು ಮಾಡಿದಾಗ, ಗೇಣಿಯನ್ನು ಕೇಳಿದರೂ ಕೊಡದೆ ಹೋಗಬಹುದು. ಇಂಥ ಕೆಲವು ಸಂದರ್ಭಗಳು ಇರುತ್ತವೆ. ಅದಕ್ಕೋಸ್ಕರವೇ ಈಗ ಗೊತ್ತು ಮಾಡಿರತಕ್ಕ ನಾಲ್ಕು ಅಂಶಗಳ ಪ್ರಕಾರ ನಿವ್ವಳ ಆದಾಯವನ್ನು ಗೊತ್ತು ಮಾಡಿದರೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಸಾಕು. ಹೀಗೆ ಮಾಡಿದರೂ ಒಂದು ವರ್ಷದ ಗೇಣಿಯನ್ನು ಕೊಡುವುದಕ್ಕಾದರೂ ಉಳಿಯುತ್ತದೆಯೇ ಎನ್ನುವ ಅನುಮಾನ ಬರುತ್ತದೆ. ಈಗ ನೂಚನೆ ಮಾಡಿರುವಷ್ಟೇ ಸಾಕು ಎಂದು ನನ್ನ ಭಾವನೆ. ತತ್ವಶಃ ಮಾನ್ಯ ಸದಸ್ಯರಾದ ತಿಮ್ಮಪ್ಪನವರು ಹೇಳಿದುದನ್ನು ನಾನು ಒಪ್ಪುತ್ತೇನೆ.

ಇದರಲ್ಲಿ ನಿವ್ವಳ ಆದಾಯ ಗೊತ್ತು ಮಾಡಿದೆ. ಆ ವರ್ಷ ಕೊಡಬೇಕಾದ ಕಂತು, ಅದರ ಜೊತೆಗೆ ಹಳೆಯ ಬಾಕಿ ಕೊಡುವುದನ್ನು ಕಳೆದು ಉಳಿದುದನ್ನು ನಿವ್ವಳ ಆದಾಯ ಎಂದು ತೋರಿಸಿ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ತತ್ವತಃ ಸರಿಯಾಗಿದ್ದರೂ ಅವನ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಅಷ್ಟನ್ನೂ ಕಳೆದ ಮೇಲೆ ಅವನಿಗೆ ಒಂದು ಕಂತು ಕೊಡುವುದೂ ಕೂಡ ಕಷ್ಟವಾಗಬಹುದು. ಅದುದರಿಂದ ಇದನ್ನು ಸೇರಿಸಬೇಕಾದ ಅಗತ್ಯ ಇಲ್ಲ ಎಂದು ನನ್ನ ಭಾವನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅವನಿಂದ ಆರಿಯರ್ಸ್ ರಿಕವರಿ ಮಾಡಲು ನಾಳೆ ಕೋರ್ಟ್‌ಗೆ ಹೋದರೆ ಅವನ ನಿವ್ವಳ ಆದಾಯ ಕಂದಾಯ ಕಟ್ಟಿಯುವುದಕ್ಕೆ ತೊಂದರೆ ಬರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವರ್ಷದ ಗೇಣಿಯನ್ನೂ ತೆಗೆದು, ಹಿಂದಿನದನ್ನೂ ತೆಗೆಯಬೇಕು ಎಂದು ಮಾಡಿದರೆ ಅವನ ನಿವ್ವಳ ಆದಾಯ ಉಳಿಯುತ್ತದೆಯೇ ಎನ್ನುವ ಅನುಮಾನ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ವಿಚಾರದಲ್ಲಿ ಹೇಳುವುದಾದರೆ 1972—73 ನೇ ಸಾಲಿನ ಗೇಣಿ ಕೊಡಬೇಕಾದ್ದು 1973 ನೇ ಮಾರ್ಚ್ ನಂತರ. 1971—72 ನೇ ಸಾಲಿನ ಡಿಕ್ರಿ ಆಗಿರುತ್ತದೆ. ಆಗ ಅವನಿಂದ ರೆಂಟ್ ರಿಕವರಿ ಮಾಡಬೇಕಾದರೆ ಅವನ ಆನ್ಯೂಯಲ್ ಇನ್‌ಕಂ ಎಷ್ಟು ಎಂದು ಕಂಡುಹಿಡಿಯುವುದಕ್ಕೆ ತೊಂದರೆ ಬರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದಕ್ಕೆ ನನ್ನದೇನೂ ಆಪ್ಷಾಗಿ ಆಡ್ಡಿ ಇಲ್ಲ. ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ ಅಧ್ಯಕ್ಷರೇ ಇದನ್ನು ಸೇರಿಸಿಕೊಳ್ಳುವುದಕ್ಕೆ ಅಪ್ಪಣೆ ಕೊಡಬೇಕು ಎಂದು ಹೇಳುತ್ತೇನೆ. ಈ ತಿದ್ದುಪಡಿ ಈರೀತಿ ಇರಬೇಕು ಎಂದು ಹೇಳುತ್ತೇನೆ.

The Mysore Tentants (Relief in Payment of Arrears) Bill, 1972 ಈ ಬಿಲ್ಲಿನ ಕ್ಲಾಸ್ 4, ಸಬ್‌ಕ್ಲಾಸ್ (ಡಿ) ಆದಮೇಲೆ (ಇ) ಆಗಿ ಈರೀತಿ ಸೇರಿಸಿಕೊಳ್ಳಬೇಕು ಎಂದು ಹೇಳುತ್ತೇನೆ ಅದು ಈರೀತಿ ಇದೆ :—

(e) The Sum required by the Tenant to pay the rent for the current year."

ಈ ತಿದ್ದುಪಡಿ ಸೇರಿಸಿರಕ್ಕಂಥ ತಮ್ಮ ಮನಸೂಪೆಗೆ ತಾವು ಒಪ್ಪಿಗೆ ಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

Mr. DEPUTY SPEAKER.—Now I will put the motion to the House. The question is :

"That the Mysore Tenants (Relief in Payment of Arrears of Rent) Bill, 1972, be taken into consideration."

The motion was adopted.

Clauses 2 and 3.

Mr. DEPUTY SPEAKER.—The question is :

"That clauses 2 and 3 do stand part of the Bill."

The motion was adopted.

Clauses 2 and 3 were added to the Bill.

Clause 4.

Mr. DEPUTY SPEAKER.—The question is :

"That clause 4 do stand part of the Bill."

The Hon'ble Revenue Minister may move his amendment.

Sri N. HUTCHAMASTHY GOWDA (Minister for Revenue).—I beg to move the following amendment to Clause 4 :

"After sub-clause (*d*) of Clause 4, the following sub-clause (*e*) shall be inserted :

(*e*) "the sum required by the tenant to pay the rent for the current year."

Mr. DEPUTY SPEAKER.—Amendment moved :

"That after sub-clause (*d*) of clause 4, the following sub-clause (*e*) shall be inserted :

4. (*e*) "the sum required by the tenant to pay the rent for the current year."

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಇದರ ಬಗ್ಗೆ ವಿವರಣೆಯನ್ನು ಮಾನ್ಯ ಸಭೆಗೆ ತಿಳಿಸಿದ್ದೇನೆ. ಇದಕ್ಕೆ ವಿವರಣೆ ಕೊಡಬೇಕಾದರೆ ಅವನ ನಿವ್ವಳ ಆದಾಯವನ್ನು ಗೊತ್ತು ಮಾಡ ಬೇಕಾದರೆ ಆ ವರ್ಷದ ಗುತ್ತಿಗೆ ಕೊಡಬೇಕಾದ ಹಣವನ್ನು ಕಳೆದು ಹಳೆಯ ಬಾಕಿಯ ಕಂತನ್ನು ಗೊತ್ತು ಮಾಡಬೇಕು ಎಂದು ನನ್ನ ಅಭಿಪ್ರಾಯ.

ಶ್ರೀ ಕೆ. ಪ್ರಭಾಕರ್.—ಈ ಸಂದರ್ಭದಲ್ಲಿ ಒಂದು ವಿಷಯ ಹೇಳಬೇಕಾದರೆ ಗೇಣಿದಾರ ಕೊಡತಕ್ಕಂಥ ರೆಂಟ್ ಏನು ಇದೆಯೋ ಅದನ್ನು ಲಕ್ಷಕ್ಕೆ ತೆಗೆದುಕೊಂಡು ಅವನ ನಿವ್ವಳ ಆದಾಯ ಗೊತ್ತು ಮಾಡಬೇಕು. ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಅವನು ಒಬ್ಬ ಜಮೀನ್ದಾರನಿಗೇ ಅಲ್ಲ 3-4 ಜಮೀನ್ದಾರರಿಗೆ ಗೇಣಿ ಕೊಡಬೇಕಾಗುತ್ತದೆ. ಅಂಥಾ ಸಮಯದಲ್ಲಿ ಇದು ಕೊಡುವುದಕ್ಕೆ ಬರುವುದಿಲ್ಲ. ಆದುದರಿಂದ ಈ ತಿದ್ದುಪಡಿ ಮಸೂದೆಗೆ "Total Sum" ಎಂದು ಸೇರಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—"the sum required by the tenant to pay the rent for the current year" ಎಂದು ಹೇಳಿರುವುದು ಒಬ್ಬನಿಗೇ ಬೇಕಾದರೂ ಅನ್ವಯವಾಗಬಹುದು, ಹೆಚ್ಚು ಜನಕ್ಕೆ ಬೇಕಾದರೂ ಅನ್ವಯವಾಗಬಹುದು. ಒಬ್ಬರಿಗಿಂತ ಹೆಚ್ಚು ಜಮೀನ್ದಾರರಿಗೆ ಗೇಣಿ ಕೊಡಬೇಕಾದ ಸಂದರ್ಭದಲ್ಲೂ ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ಈ ಕ್ಲಾಸ್ ಇದೆ. ಆದುದರಿಂದ "Total sum" ಅಂತ ಸೇರಿಸಬೇಕಾದ ಅವಶ್ಯಕತೆ ಇಲ್ಲ ಎಂದು ನನ್ನ ಭಾವನೆ.

Mr. DEPUTY SPEAKER—I will put the amendment to the House. The question is :

"That after sub-clause (d) of Clause 4, the following sub-clause (e) shall be inserted :

4. (e) "The sum required by the tenant to pay the rent for the current year."

The Amendment was adopted.

Mr. DEPUTY SPEAKER.—I will put Clause 4, as amended to the House. The question is :

"That Clause 4, as amended, do stand part of the Bill."

The motion was adopted.

Clause 4, as amended, was added to the Bill.

Clauses 5 to 9.

Mr. DEPUTY SPEAKER.—The question is :

"That Clauses 5, to 9 both inclusive, do stand part of the Bill."

The motion was adopted.

Clause 5, to 9 both inclusive were added to the Bill.

Clause 1.

Mr. DEPUTY SPEAKER.—The question is :

Clause 1, the Long Title, the Preamble and the Enacting Formula were added to the Bill.

The motion was adopted.

"That Clause 1, Long Title, the Preamble and the Enacting formula were added to the Bill."

Motion to pass.

Sri N. HUTCHAMASTHY GOWDA (Minister for Revenue).—Sir, I move :

"That the Mysore Tenants (Relief in Payment of Arrears of Rent) Bill, 1972, as amended, be passed."

Mr. DEPUTY SPEAKER.—The question is :

"That the Mysore Tenants (Relief in Payment of Arrears of Rent) Bill, 1972 as amended be passed."

The motion was adopted and Bill as amended was passed.

GOVERNMENT GRANTS (MYSORE EXTENSION) BILL, 1972

Motion to consider.

Sri N. HUTCHAMASTHY GOWDA (Minister for Revenue).—I beg to move :

"That the Government Grants (Mysore Extension) Bill, 1972, be taken into consideration."